

# ದೀಪಿಕಾ ಸಂಬಂಧಗಳ ಸಿಕ್ಕಿನ ನಾಸ್ಟಾಲ್ಜಿಯಾ

ಬೆಂಗಳೂರಿನ ಶಾಲೆಗಳ ಮಕ್ಕಳ ಪಾಟೀಚೀಲಗಳಲ್ಲಿ ಕಾಂಡೋಮ್, ಗರ್ಭ ನಿರೋಧಕ ಮಾತ್ರೆ, ಮದ್ಯ ಬೆರೆಸಿದ ನೀರಿನ ಬಾಟಲ್ ಎಲ್ಲವೂ ಸಿಕ್ಕೊಡನೆ ಸಮಾಜೋ–ಸಂಸ್ಕೃತಿ ಸ್ಥಿತ್ಯಂತರದ ಚರ್ಚೆಯೊಂದು ಸಾಮಾಜಿಕ ಜಾಲತಾಣದಲ್ಲಿ ಕಾವು ಪಡೆದುಕೊಂಡಿದೆ. ಇದೇ ಸಂದರ್ಭದಲ್ಲಿ ದೀಪಿಕಾ ಪಡುಕೋಣೆ ನೀಡಿದ ಸಂದರ್ಶನವೊಂದೂ ನೆಟ್ಟಿಗರ ನೋಟ ಹಿಡಿದಿಟ್ಟುಕೊಂಡಿದೆ. ಸಂಬಂಧಗಳ ಸಿಕ್ಕುಗಳಿಂದ ಮೊದಲೇ ಬಿಡಿಸಿಕೊಳ್ಳಲು ಹೆಣಗಾಡಿದ್ದ ಅವರು, ಮದುವೆಯ ಕಟ್ಟುಪಾಡಿಗೆ ಒಳಪಡದಂತೆ ಗಂಡಿನೊಂದಿಗೆ ಡೇಟ್ ಮಾಡಬೇಕು ಎನ್ನುವ ನಿರ್ಧಾರಕ್ಕೆ ವರ್ಷಗಳ ಹಿಂದೆ ಬಂದಿದ್ದರಂತೆ.

ದೀಪಿಕಾ ಬದುಕಿನಲ್ಲಿ ಕೆಲವು ಸಂಗಾತಿಗಳು ಬಂದು, ಹೋಗಿದ್ದರು. 2012ರಲ್ಲಿ ರಣವೀರ್ ಸಿಂಗ್ ಅವರನ್ನು ಆಪ್ತತೆಯಿಂದ ಮಾತನಾಡಿಸುವಾಗ, ದೀಪಿಕಾ ತಮ್ಮ ಇಂಗಿತವನ್ನು ವ್ಯಕ್ತಪಡಿಸಿದ್ದರು. 'ಒಂದಿಷ್ಟು ಕಾಲ ಒಂಟಿಯಾಗಿರುವುದೇ ಲೇಸೆನಿಸುತ್ತಿದೆ. ಆದರೆ, ನನ್ನ ಹಾಗೂ ನಿನ್ನ ನಡುವೆ ಆಪ್ತಸಂಬಂಧ ಮೂಡಿರುವುದೇನೊ ನಿಜ. ಹಾಗೆಂದು ನನಗೆ ಭವಬಂಧನ ಬೇಕಿಲ್ಲ. ಮುಂದೆ ನನ್ನ ಮನಸ್ಸು ಇನ್ನಾರನ್ನೋ ಬಯಸತೊಡಗಿದರೆ ನಿನಗೆ ಗಾಸಿಯಾಗಬಹುದು. ಬೇಷರತ್ತಾಗಿ ನಾವು ಇರಬಹುದಾದರೆ ಓಕೆ' ಎನ್ನುವ ಧಾಟಿಯಲ್ಲಿ ಆಗ ದೀಪಿಕಾ ಹೇಳಿದ್ದಾಗಿ ಸಂದರ್ಶನದಲ್ಲಿ ನೆನಪಿಸಿಕೊಂಡಿದ್ದಾರೆ.

ತಮ್ಮ 13ನೇ ವಯಸ್ಸಿನಿಂದಲೂ ಪ್ರೇಮದಲ್ಲಿ ಬೀಳುತ್ತಾ ಬಂದಿದ್ದಾಗಿ ಹೇಳಿರುವ ದೀಪಿಕಾ, ಹಚ್ಚಿಕೊಂಡವರಿಂದ ದೂರ ಆದಾಗ ಆಗುವ ಸಂಕಟವನ್ನು ತಾವು ಪ್ರತಿ ಹಂತದಲ್ಲಿಯೂ ಅನುಭವಿಸಿದ್ದಾಗಿ ನುಡಿದಿದ್ದಾರೆ. ಬಾಲಿವುಡ್‌ನಲ್ಲಿ ತಮ್ಮ ವೃತ್ತಿಬದುಕು ತಿರುವು ಪಡೆಯುವ ಸಂದರ್ಭದಲ್ಲಿಯೇ ದೀಪಿಕಾ ಖಿನ್ನತೆಗೂ ಒಳಗಾಗಿದ್ದರು. ಅದರಿಂದ ಹೊರಬರಲು ಮನೋವೈದ್ಯರ ನೆರವು ಪಡೆದಿದ್ದರು.

2018ರಲ್ಲಿ ದೀಪಿಕಾ ಹಾಗೂ ರಣವೀರ್ ಸಿಂಗ್ ಇಬ್ಬರೂ ಅದ್ದೂರಿಯಾಗಿಯೇ ವಿವಾಹವಾದರು. ನಂತರವೂ ಚಲನಚಿತ್ರಗಳಲ್ಲಿ ತೊಡಗುವುದನ್ನು ಮುಂದುವರಿಸಿದ್ದೇ ಅಲ್ಲದೆ, ನಿರ್ಮಾಣಕ್ಕೂ ಕೈಹಾಕಿದರು.

'ನನ್ನನ್ನು ಪದೇಪದೇ ಗಂಡಸು ಧಾರ್ಷ್ಟ್ಯದಿಂದ ಪ್ರಶ್ನಿಸಬಾರದು ಎಂಬ ಕಾರಣಕ್ಕೆ ಒಂಟಿಯಾಗಿ ಇರಬೇಕೆಂದು ಆಗ ನಿರ್ಧರಿಸಿದ್ದೆ. ಆಮೇಲೆ ವಿವಾಹ ಬಂಧನಕ್ಕೆ ಒಳಪಡುವಂತಹ ಮನಸ್ಥಿತಿ ಉಂಟಾಯಿತು' ಎಂದು ದೀಪಿಕಾ ನಗುವನ್ನು ಸವರಿ ಹೇಳಿಕೊಂಡರು.

ಶಾರುಖ್ ಖಾನ್ ಜತೆ 'ಪಠಾಣ್' ಸಿನಿಮಾದಲ್ಲಿ ದೀಪಿಕಾ ಅಭಿನಯಿಸಿದ್ದು, ಅದು ತೆರೆಕಾಣಬೇಕಿದೆ.



■ ವಿಶಾಖ ಎನ್.

# 'ಕಾಶ್ಮೀರ್ ಫೈಲ್ಸ್' ಟೀಕಿಸಿದ ನದಾವ್ ಯಾರು?

ಇಸ್ರೇಲ್ ಸಿನಿಮಾ ನಿರ್ದೇಶಕ ನದಾವ್ ಲಾಪಿಡ್ ಗೋವಾದಲ್ಲಿ ನಡೆದ ಭಾರತೀಯ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ (ಐಎಫ್ಎಫ್ಐ) ಸಮಾರೋಪ ಸಮಾರಂಭದಲ್ಲಿ ಮಾತಿನ ಬಾಂಬ್ ಸಿಡಿಸಿದರು. 'ಕಾಶ್ಮೀರ್ ಫೈಲ್ಸ್' ಒಂದು ಪ್ರಚಾರಪ್ರಿಯವೂ, ಅಶ್ಲೀಲವೂ ಆದ ಸಿನಿಮಾ ಎನ್ನುವುದು ಅವರ ಅಭಿವ್ಯಕ್ತಿ. ಅದನ್ನು ವೇದಿಕೆ ಮೇಲೆ ಅವರು ನಿರ್ಭಿಡೆಯಿಂದ ಹೇಳಿದರು. ಅದಾದ ಮರುದಿನವೇ ಭಾರತದಲ್ಲಿನ ಇಸ್ರೇಲ್ ರಾಯಭಾರಿ ನಾರ್ ಗಿಲೋನ್ ಸರಣಿ ಟ್ವೀಟ್‌ಗಳ ಮೂಲಕ ಅವರನ್ನು ತರಾಟೆಗೆ ತೆಗೆದುಕೊಂಡರು. ಹಾಗೆ ಹೇಳಲು ಅವರಿಗೆ ನಾಚಿಕೆಯಾಗಬೇಕು ಎಂದದ್ದೇ ಅಲ್ಲದೆ, ಭಾರತೀಯರಲ್ಲಿ ಕ್ಷಮೆಯನ್ನೂ ಯಾಚಿಸಿದರು.

ನದಾವ್ ಅದಾದ ಮೇಲೆಯೂ ನೀಡಿದ ಪ್ರತಿಕ್ರಿಯೆ ಹೀಗಿತ್ತು: 'ಕಾಶ್ಮೀರ್ ಫೈಲ್ಸ್ ಬಗೆಗೆ ಮಾತನಾಡುವ ಹಿಂದಿನ ದಿನದಿಂದಲೂ ನನಗೆ ಆತಂಕವಿತ್ತು. ಒಂದು ದೇಶ ನನ್ನನ್ನು ಅತಿಥಿಯಾಗಿ ಕರೆಸಿ, ತೀರ್ಪುಗಾರರ ಸಮಿತಿಯ ಅಧ್ಯಕ್ಷನನ್ನಾಗಿ ಮಾಡಿದೆ. ಅದರ ನೆಲದಲ್ಲಿ ನಿಂತು ಅಲ್ಲಿ ತಯಾರಾದ ಸಿನಿಮಾವನ್ನೇ ನಿರ್ಭಿಡೆಯಿಂದ ಟೀಕಿಸಿದರೆ ಸ್ಥಳೀಯರು ಕ್ರುದ್ಧರಾಗಬಹುದು ಎಂದು ನನಗೆ ಮೊದಲೇ ಅನ್ನಿಸಿತ್ತು. ಆದರೆ, ಇಸ್ರೇಲ್‌ನಲ್ಲಿ ನಾನು ಕಂಡುಂಡಿರುವ ಜಗತ್ತಿನ ಸೂಕ್ಷ್ಮ ಸಂಗತಿಗಳೊಟ್ಟಿಗೆ ಸಮೀಕರಿಸಿಕೊಂಡೇ ಈ ಸಿನಿಮಾವನ್ನೂ ನೋಡಿದೆ. ಇಂತಹ ವಸ್ತುವಿಷಯದ ಹಿಂದಿರಬಹುದಾದ ಮನಸ್ಥಿತಿಯನ್ನು ಒರೆಗೆಹಚ್ಚಿದೆ. ಹೀಗಾಗಿ ಪ್ರಾಮಾಣಿಕವಾಗಿ ನನಗೆ ಅನಿಸಿದ್ದನ್ನು ಹೇಳಿಬಿಟ್ಟೆ.'



ನದಾವ್ ಅವರಿಗೆ ನಲವತ್ತೇಳು ವಯಸ್ಸು. ಅವರ ತಂದೆ ಹಲೀಮ್ ಲಾಪಿಡ್ ಕೂಡ ಬರಹಗಾರರು. ತಾಯಿ ಎರಾ ಚಲನಚಿತ್ರ ಸಂಕಲನಕಾರರಾಗಿ ಕೆಲಸ ಮಾಡಿದವರು. ಸೂಕ್ಷ್ಮ ಸಂವೇದನೆಯ ಜೊತೆಗೇ ಬೆಳೆದ ನದಾವ್, ಟೆಲ್ ಅವಿವ್ ವಿಶ್ವವಿದ್ಯಾಲಯದಲ್ಲಿ ತತ್ವಶಾಸ್ತ್ರವನ್ನು ಓದಿದರು. ಇಸ್ರೇಲ್‌ನ ರಕ್ಷಣಾ ಪಡೆಯಲ್ಲಿ ಕೆಲಸ ಮಾಡಿದ ನಂತರ, ಪ್ಯಾರಿಸ್‌ಗೆ ಹೋಗಿದ್ದರು. ಇಸ್ರೇಲ್‌ಗೆ ಮರಳಿ, ಜೆರುಸಲೇಂನ ಸ್ಪೀಗಲ್ ಫಿಲ್ಮ್ ಅಂಡ್ ಟೆಲಿವಿಷನ್ ಸ್ಕೂಲ್‌ನಲ್ಲಿ ಅಧ್ಯಯನ ಮಾಡಿದರು. 'ಪೊಲೀಸ್‌ಮನ್' ಎಂಬ ಅವರ ಚಿತ್ರ ಲೊಕಾರ್ನೊ ಚಿತ್ರೋತ್ಸವದಲ್ಲಿ ತೀರ್ಪುಗಾರರ ಪ್ರಶಸ್ತಿ ಪಡೆದಿತ್ತು. 2016ರಲ್ಲಿ ಕಾನ್ ಚಿತ್ರೋತ್ಸವದಲ್ಲಿ 'ಇಂಟರ್‌ನ್ಯಾಷನಲ್ ಕ್ರಿಟಿಕ್ಸ್ ವೀಕ್' ವಿಭಾಗದಲ್ಲಿ ತೀರ್ಪುಗಾರರಲ್ಲಿ ಅವರೂ ಒಬ್ಬರಾಗಿದ್ದರು. 2019ರಲ್ಲಿ ಬರ್ಲಿನ್ ಚಿತ್ರೋತ್ಸವದಲ್ಲಿ 'ಸಿನಾನಿಮ್ಸ್' ಎಂಬ ಅವರ ಸಿನಿಮಾಗೆ 'ಗೋಲ್ಡನ್ ಬೇರ್' ಪ್ರಶಸ್ತಿ ಕೂಡ ಲಭಿಸಿದೆ.